ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಮಾನ್ಯ ಮಂತ್ರಿಮಹೋದಯರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಹೇಳುವುದಾದರೆ ಒಂದೆರಡು ಕಾರ್ಖಾನೆಗಳು ಏತಕ್ಕೆ ರಾಜ್ಯದಲ್ಲಿರತಕ್ಕ ಅನೇಕ ಸಕ್ಕರೆ ಕಾರ್ಖಾನೆಗಳ ಸ್ಥಿತಿಯನ್ನು ನೋಡಿದಾಗ, ಮಹಾರಾಷ್ಟ್ರಕ್ಕಿಂತ ನಾವು ಕೆಳದರ್ಜೆಯಲ್ಲಿದ್ದೇವೆ. ಈ ಕಾರ್ಖಾನೆಗೆ ಕಬ್ಬು ಇಲ್ಲವೆಂದು ಹೇಳುತ್ತಿದ್ದಾರೆ ಅನೇಕ ಕಡೆಗೆ ರೈತರು ಬೆಳೆದಂತಹ ಕಬ್ಬನ್ನು ಕ್ರಷ್ ಮಾಡಲಿಕ್ಕೆ ಕಾರ್ಖಾನೆಯವರು ತೆಗೆದುಕೊಳ್ಳುತ್ತಿಲ್ಲ ಮಾನ್ಯ ಅಧ್ಯಕ್ಷರೇ, ಸಹಕಾರಿ ವಲಯಗಳಲ್ಲಿ ಕೆಲವು ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತಿವೆ ಎಂದು ತಮಗೆ ಗೊತ್ತು ನಿಮ್ಮಪರನ್ನೇ ಡೈರೆಕ್ಟರ್ ಆಗಿ ಹಾಕುತ್ತೀರಿ ಎಂದು ಹೇಳಿದರು. ಸಹಕಾರಿ ವಲಯದಲ್ಲಿ ನನಗಿಂತ ಅವರಿಗೆ ಚೆನ್ನಾಗಿ ಅರ್ಥವಾಗಿದೆ. ಅವರ ಸರ್ಕಾರ ಇದ್ದಾಗ ಹೇಗೆ ಮಾಡುತ್ತಿದ್ದರೋ, ನಮ್ಮ ಸರ್ಕಾರ ಇದ್ದಾಗ ಹಾಗೆಯೇ ಮಾಡುತ್ತಿದ್ದೇವೆ. ಕೆಲವು ಕಡೆ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತವೆ, ಕೆಲವು ಕಡೆ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುವುದಿಲ್ಲ ಇದನ್ನು I don't take it on party lines. ಎಲ್ಲೋ ಕೆಲವರು ಸಂಕೇಶ್ವರ ಷುಗರ್ ಫ್ಯಾಕ್ಟರಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಯಾರು ಯೋಗ್ಯ ಸಹಕಾರಿಯಾಗಿ ಇರುತ್ತಾನೆ, ಆ ಉದ್ದೇಶದಿಂದ ಇರುವವರು ಮಾತ್ರ ಉಳಿದುಕೊಂಡಿದ್ದಾರೆ ಅದಃಬಿಟ್ಟು ಏನೋ ಚೇರ್ಮನ್ ಆದೆ, ಬೋರ್ಡ್ ಮೆಂಬರ್ ಆದೆ ಎಂದರೆ ಎಲ್ಲೂ ಉಳಿದಿಲ್ಲ. ಈಗ ೧೪ ಸಕ್ಕರೆ ಕಾರ್ಖಾನೆಗಳಲ್ಲಿ ಐದಾರು ಅಥವಾ ನಾಲ್ಕು ಚೆನ್ನಾಗಿ ನಡೆಯುತ್ತಿವೆ ಇನ್ನು ಉಳಿದವು ಎಲ್ಲಾ ಲುಕ್ವಾಸಿನಲ್ಲಿವೆ. ಅದಕ್ಕೆ ಏನು ಕಾರಣವೆಂದು ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. Karnataka has better potential than Tamil Nadu or Andhra Pradesh. ನಮ್ಮ ಪೊಟೆನ್‌ಷಿಯಲ್‌ನಿಂದ ಹೆಚ್ಚು ಕಾರ್ಖಾನೆಗಳನ್ನು ನಡೆಸಬಹುದು. ಇನ್ನೂ ಚೆನ್ನಾಗಿ ನಡೆಸಬಹುದು ಅದಕ್ಕಾಗಿ ಕೇಂದ್ರಸರ್ಕಾರದ ಕಡೆಗೆ ಈ ಬಗ್ಗೆ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪರಾಹಿ ಯೋಜನೆಯಲ್ಲಿ ಬದಲಿ ರಸ್ತೆ ಮಾಡುವುದು,

೩೦೧೨ ಶ್ರೀ ಬಿ. ಸ್ವಾಮಿರಾವ್ (ಜೊಸನಗರ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಾಹಿ ಯೋಜನೆಯಲ್ಲಿ ಬದಲಿ ರಸ್ತೆ ವ್ಯವಸ್ಥೆಯಾಗಿದೆಯೇ ?

ಆ) ಯಡೂರು-ತೀರ್ಥಹಳ್ಳಿ ರಸ್ತೆಯಲ್ಲಿ ನೀರು ನಿಲ್ಲಿಸಲಾಗಿದೆಯೇ ? ಹಾಗಿದ್ದಲ್ಲಿ ಸಾರಿಗೆ ಸಂಪರ್ಕದ ವ್ಯವಸ್ಥೆ ಏನು ?

ಇ) ನೀರು ಶೇಖರಣೆ ಮಾಡಿಯೂ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿಲ್ಲದಿರುವುದು ನಿಜವೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಬದಲಿ ರಸ್ತೆ ವ್ಯವಸ್ಥೆಯಾಗಿದೆ. ಬದಲಿ ರಸ್ತೆ ನಿರ್ಮಾಣ ಕಾರ್ಯ ಲೋಕೋಪಯೋಗಿ ಇಲಾಖೆಯಿಂದ ನಡೆಯುತ್ತಿದೆ.

ಆ) ಮಾನ್ವಿ ಅಣೆಕಟ್ಟು ಜಲಾಶಯದಲ್ಲಿ ಭಾಗಶಃ ನೀರು ಶೇಖರಣೆಯಾಗಿರುವುದರಿಂದ ರಸ್ತೆಯ ಸ್ವಲ್ಪ ಭಾಗದಲ್ಲಿ ನೀರು ನಿಂತಿದೆ. ದೋಣಿ ಸಂಚಾರದ ವ್ಯವಸ್ಥೆ ಮಾಡಿದೆ. ಬಸ್ ವ್ಯವಸ್ಥೆ ಸಹ ಮಾಡಲಾಗಿದೆ.

ಇ) ಈ ವರ್ಷದ ಮುಂಗಾರು ಮಳೆಯಿಂದಾಗಿ ಭಾಗಶಃ ನೀರು ಶೇಖರಣೆ ಮಾಡಲಾಗಿದೆ. ಭೂಗರ್ಭ ವಿದ್ಯುದಾಗಾರವನ್ನು ೧೯೮೯ನೇ ಫೆಬ್ರುವರಿ ತಿಂಗಳಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು ಈಗ ಶೇಖರಣೆಯಾಗಿರುವ ನೀರನ್ನು ಮುಂದಿನ ಮಳೆಗಾಲದವರೆವಿಗೂ ವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯೋಗಿಸಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬದಲಿ ವ್ಯವಸ್ಥೆಯಾಗಿದೆ ಎಂದು ಹೇಳಿದರು. ನಾನು ಆದೇ ತಾಲ್ಲೂಕಿನವನು. ನನಗಂತೂ ಗೊತ್ತಿಲ್ಲ. ಅಲ್ಲಿ ಒಂದು ಬದಲಿ ವ್ಯವಸ್ಥೆ ಇದೆ. ಆಕಾಶದಿಂದ ಹೋಗಿ ಇಳಿಯಬಹುದು. ಆ ದೇವರೇ ಮಾಡಿಕೊಟ್ಟಿದ್ದಾರೆ ಈ ಬದಲಿ ವ್ಯವಸ್ಥೆಯನ್ನು. ಮತ್ತೆ ಈಗ ಅನೇಕ ಊರುಗಳು ದ್ವೀಪಾಂತರ ಪ್ರದೇಶಗಳಾಗಿ ಜನರು ಕೊಗುತ್ತಿದ್ದಾರೆ. ಇದು ಏನಾದರೂ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ವಾಸ್ತವವಾಗಿರುವುದಕ್ಕಿಂತ ಕಷ್ಟವನ್ನು ಹೇಳಿದರೆ ಕೇಳಬಹುದು. ಆದರೆ ಕಾಲ್ಪನಿಕವಾಗಿ ಹೇಳಿದರೆ ಹೇಗೆ ? ಅಲ್ಲಿಗೆ ಮಾನ್ಯ ಸದಸ್ಯರೊಬ್ಬರೇ ಅಲ್ಲ, ನಾನೂ ಕೂಡ ಹೋಗಿ ನೋಡಿದ್ದೇನೆ. ಅಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರ ಕ್ಲಿಯರೆನ್ಸ್ ಇಲ್ಲದೇ ಮಾಡುವುದ ಕ್ಕಾಗುವುದಿಲ್ಲ. ಹೈ ಪವರ್ ಕಮಿಟಿಯಲ್ಲಿ ಇವರೂ ಸದಸ್ಯರಿದ್ದಾಗ, ಅವರಿಗೂ ಗೊತ್ತಿದೆ. ಪಿ. ಡಬ್ಲ್ಯು. ಡಿ. ನವರು ಕೆಲಸ ಮಾಡುವಾಗ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಅಬ್ಜೆಕ್ಟ್ ಮಾಡಿದರೆ. ಅವರು ಏನು ಮಾಡುತ್ತಾರೆ ? ಇದಕ್ಕೆ ಗವರ್ನ್‌ಮೆಂಟ್ ಆಫ್ ಇಂಡಿಯಾ ಪರ್ಮಿಷನ್ ಇಲ್ಲದೆ ನಾವು ಒಂದು ಹೆಜ್ಜೆ ಕೂಡ ಇಡುವುದಕ್ಕಾಗುವುದಿಲ್ಲ. ಇದು ಅವರಿಗೂ ಗೊತ್ತಿದೆ. ಬೇಲಾಗಿ ಎಲ್ಲಿಯವರೆಗೆ ರಸ್ತೆ ಇದೆ, ಅಲ್ಲಿಗೆ ಈ ಕೊನೆಯಿಂದ, ಆ ಕೊನೆಯವರೆಗೆ ಬಸ್ ವ್ಯವಸ್ಥೆ ಇದೆ. ಮಧ್ಯೆ ಎಲ್ಲಿ ನೀರು ಇದೆ ಅಲ್ಲಿ ಎರಡು ದೋಣಿ ಕೂಡ ಇದೆ. ಇದಕ್ಕಿಂತ ಹೆಚ್ಚಿನ ವ್ಯವಸ್ಥೆಯನ್ನು ಯಾವ ಸರ್ಕಾರಕ್ಕೂ ಮಾಡುವುದಕ್ಕಾಗುವುದಿಲ್ಲ, ಅದರೊಳಗೆ ನಾಳೆ ಬೇರೆ ತರಹದ ಹೈಪವರ್ ಕಮಿಟಿ, ಪಾರಾಹಿ ರಿಹಾಬಿಲಿಟೇಷನ್ ಕಮಿಟಿ ಏನಿದೆ, ಅದರ ಸಭೆ ಕರೆದಿದ್ದೇನೆ. ನಾವು ಇಲ್ಲಿ ಏನಾದರೂ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಮಾಡುವುದಕ್ಕಾಗುವುದಿಲ್ಲ, ಆದ್ದರಿಂದ ನಾವು ಇದನ್ನು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಯೋಜನೆ ಮಾಡಿ ನೀರು ನಿಲ್ಲಿಸುವ ಮುಂಚೆ ಬದಲಿ ವ್ಯವಸ್ಥೆ ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲ. ನಾನು ಅದಕ್ಕೊಸ್ಕರವೇ ಕೇಳುತ್ತಿದ್ದೇನೆ. ಮತ್ತೆ ಇಲ್ಲಿಯೂ ಕೂಡ ಎರಡು ರಸ್ತೆಗಳು ಇವೆಯೆಂದು ಹೇಳಿದರು ಅವು ಯಾವ ರಸ್ತೆಗಳು ಎಂಬುದನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಲೂ ಅನೇಕ ಹಳ್ಳಿಗಳಿಗೆ ಸಂಪರ್ಕ ಕಡಿದುಹೋಗಿದೆ. ಮತ್ತಿಗಾ ಎಂಬ ಊರಿಗೆ ನಾನು ಹೋಗಿದ್ದೇನೆ, ಯಾವುದೇ ಕಡೆಯಿಂದ ಹೋಗುವುದಕ್ಕಾಗುವುದಿಲ್ಲ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಮತ್ತೆ ಬದಲಿ ವ್ಯವಸ್ಥೆ ಮಾಡದೇ ಯೋಜನೆ ಮಾಡಿ ನೀರು ನಿಲ್ಲಿಸಿದರೆ ಅವರ ಗತಿ ಏನಾಗಬೇಕು. ಸ್ವಲ್ಪ ನೀರು ನಿಲ್ಲಿಸುತ್ತೇವೆ ಎಂದು ಹೇಳುತ್ತಾರೆ ಒಬ್ಬ ಮನುಷ್ಯ ಮುಳುಗುವುದಕ್ಕೆ ೨ ಇಂಚು, ೫ ಇಂಚು, ನೀರು ಇದ್ದರೆ ಸಾಕಾಗುತ್ತದೆಯೇ ? ಕೊನೆಯ ಪಕ್ಷ ೫ ಅಡಿಗಿಂತ ಹೆಚ್ಚು ನೀರು ಬೇಕು. ಈಗಾಗಲೇ ದೋಣಿಯಿಂದ ಹೋಗುವುದೂ ಕಷ್ಟವಾಗಿದೆ. ದೋಣಿಗಳು ಹತ್ತುವುದಕ್ಕೆ ಇಳಿಯುವುದಕ್ಕೆ ಸ್ಥಳ ಕೂಡ ಇಲ್ಲ. ಒಬ್ಬ ಮನುಷ್ಯ ಬಿದ್ದು, ಪೆಟ್ಟಾಗಿ ಮಣಿಪಾಲ್ ಆಸ್ಪತ್ರೆಗೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದಾನೆ. ಇಂತಹ ದುರಂತಗಳು ಪದೇ ಪದೇ ನಡೆಯುತ್ತಿರುತ್ತವೆ. ಯಾರೂ ಇದರ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಈ ವ್ಯವಸ್ಥೆಯನ್ನು ಸುಧಾರಣೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಇದಕ್ಕೆ ಸಂಬಂಧಿಸಿದ ವಿವರಗಳನ್ನು ಸಭೆಯಲ್ಲಿ ಕೊಡುತ್ತೇನೆ.

ಜಲ ವಿದ್ಯುಚ್ಛಕ್ತಿ ಉತ್ಪನ್ನದ ಕುರಿತು.

೩೦೪ ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಸಾರಿ ಎಷ್ಟು ಮಳೆ ಆಯಿತು ? ಎಷ್ಟು ಜಲವಿದ್ಯುತ್ ಉತ್ಪಾದನಾ ಕೇಂದ್ರಗಳು ನೀರಿನ ಅಭಾವದಿಂದ ಪಾರಾಗಿವೆ ?

ಆ) ಈ ಎಲ್ಲ ವಿದ್ಯುಚ್ಛಕ್ತಿ ಉತ್ಪನ್ನಗಳಿಂದ ಉತ್ಪನ್ನ ಆಗುತ್ತಿರುವ ನಿತ್ಯದ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು ? ಇದು ಸ್ಥಾವಲಂಬನಾ ಪ್ರಮಾಣದ ಗುರಿ ತಲುಪಿದೆಯೇ ?